**ದಿನಾಂಕಃ 03-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಐ.ಎಸ್.ಈ ವಕೀಲರಿಂದಃ**

04. ನಾನು ಈ ದಾವೆಯನ್ನು ಆಸ್ತಿಯಲ್ಲಿ ಪಾಲು ಕೇಳಿ ಸಲ್ಲಿಸಿರುತ್ತೇನೆ. ನಾನು ದತ್ತಕ ಮಗಳೆಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ದತ್ತಕ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ದತ್ತಕ ಪತ್ರದ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಿನಾಂಕಃ 07.03.2015 ರಂದು ನನ್ನನ್ನು ದತ್ತಕ ನೀಡಲಾಗಿದೆ. ಸದರಿ ದತ್ತಕದ ಸಮಯದಲ್ಲಿ ದತ್ತಕಕ್ಕೆ ಸಂಬಂಧಿಸಿದ ಎಲ್ಲ ವಿದಿ-ವಿಧಾನಗಳು ನಡೆದ ಬಗ್ಗೆ ನನಗೆ ಗೊತ್ತಿಲ್ಲ ಏಕೆಂದರೆ ನಾನು ಚಿಕ್ಕವಳಿದ್ದೆ. 2015 ನೇ ಸಾಲಿನಲ್ಲಿ ನಾನು 8 ನೇ ತರಗತಿಯಲ್ಲಿ ಓದುತ್ತಿದ್ದೆ. ನಾನು 8 ನೇ ತರಗತಿಯಲ್ಲಿ ಓದುತ್ತಿದ್ದ ಸಮಯದಲ್ಲಿ ನಾನು ಎಲ್ಲಿಯಾದರೂ ಹೋದರೆ ಸದರಿ ಸ್ಥಳದಲ್ಲಿ ಯಾರೆಲ್ಲ ಇರುತ್ತಿದ್ದರು ಎಂಬ ಬಗ್ಗೆ ನನಗೆ ತಿಳುವಳಿಕೆ ಇತ್ತು ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆ. ನಾನು ಈ ದಾವೆಯನ್ನು 2021 ರಲ್ಲಿ ಸಲ್ಲಿಸಿರುತ್ತೇನೆ. ನಾನು ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲಾತಿಗಳನ್ನು ನಾನೇ ತೆಗೆಸಿರುತ್ತೇನೆ. ಸದರಿ ದಾಖಲಾತಿಗಳನ್ನು ಯಾವ ವರ್ಷದಲ್ಲಿ ತೆಗೆಯಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಸದರಿ ದಾಖಲೆಗಳನ್ನು ದಾವೆ ದಾಖಲಿಸುವ ಎಷ್ಟು ದಿವಸಗಳ ಮುಂಚೆ ತೆಗೆಯಿಸಲಾಗಿದೆ ಎಂದು ನನಗೆ ನೆನಪಿಲ್ಲ. ನಾನು 2021 ನೇ ಸಾಲಿನಲ್ಲಿ ಯಾವುದೇ ದಾಖಲೆಗಳನ್ನು ತೆಗೆಯಿಸಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳನ್ನು 2016 ನೇ ಸಾಲಿನಲ್ಲಿ ತೆಗೆಯಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ.

05. ನಾನು ದತ್ತಕ ಹೋದಾಗ ದತ್ತು ಪಡೆದ ಕುಟುಂಬದ ಬಗ್ಗೆ ನನಗೆ ಮಾಹಿತಿ ಇತ್ತು. ಸದರಿ ದತ್ತು ಪಡೆದ ಕುಟುಂಬದಲ್ಲಿ 5 ಜನ ಇದ್ದಾರೆ ಅವರೆಂದರೆ 1) ಶಕುಂತಲಾ, 2) ಬಸವರಾಜ, 3) ಮಂಜಪ್ಪ, 4) ಮಲಕಪ್ಪ ಮತ್ತು 5) ಕನ್ನಪ್ಪ ರವರು ಇದ್ದಾರೆ.

ಸದರಿ ಮೇಲೆ ಹೇಳಿದವರು ನಮ್ಮ ಕುಟುಂಬ ಸದಸ್ಯರಾದ್ದರಿಂದ ಅವರ ಬಗ್ಗೆ ನನಗೆ ಗೊತ್ತಿದೆ. ಸದರಿ ಮೇಲೆ ಹೇಳಿದವರ ಪೈಕಿ ಕನ್ನಪ್ಪ ಮತ್ತು ಮಲಕಪ್ಪ ತೀರಿಕೊಂಡಿರುತ್ತಾರೆ. ಮಲಕಪ್ಪ ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ಆದರೆ ಕನ್ನಪ್ಪ ದಿನಾಂಕ 05.11.2014 ರಂದು ತೀರಿಕೊಂಡಿರುತ್ತಾರೆ. ಮಲಕಪ್ಪರವರು ತೀರಿಕೊಂಡಾಗ ನಾನು ಇರಲಿಲ್ಲ. ಸದರಿ ಕುಟುಂಬದಲ್ಲಿ ನಾನು ದತ್ತು ಹೋಗದೇ ಇರುವುದರಿಂದ ಸದರಿ ಮಲಕಪ್ಪರವರು ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

06. ಸದರಿ ಮೇಲೆ ಹೇಳಿದ 5 ಜನ ತಾಯಿ ಹಂಪವ್ವ ಹಾಗೂ ಹಂಪವ್ವ ರವರ ಗಂಡ ಶಿವಪ್ಪ ಎಂದು ಇದ್ದರು. ದತ್ತಕ ಪತ್ರವನ್ನು ನಾನು ಪೂರ್ತಿಯಾಗಿ ಓದಿಲ್ಲ. ಈಗ ಸಾಕ್ಷಿಗೆ ಒಂದು ತಾಲೂಕು ಆಸ್ಪತ್ರೆ ಬ್ಯಾಡಗಿಯ ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಕನ್ನಪ್ಪ ಶಿವಪ್ಪ ಕೊಪ್ಪದ ರವರು ದಿನಾಂಕಃ05.12.2014 ರಂದು ತೀರಿಕೊಂಡಿರುತ್ತಾರೆ ಎಂದು ಬರೆದಿದೆ ಎಂದರೆ ಸಾಕ್ಷಿ ತಪ್ಪು ಬರೆದಿದೆ ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-31 ನ್ನು ತೋರಿಸಿದ್ದು ಸದರಿ ನಿಪಿ-31 ರ ಮೇಲೆ ಡಿಸೆಂಬರ್ 2014 ಎಂದು ಬರೆದಿದೆ ಎಂದರೆ ಸರಿ. ನಿಪಿ-31 ರಲ್ಲಿ ಡಿಸೆಂಬರ್ ತಿಂಗಳಲ್ಲಿ ತೀರಿಕೊಂಡ ವ್ಯಕ್ತಿಗಳ ಬಗ್ಗೆ ನಮೂದಿದೆ ಎಂದರೆ ಸರಿ. ಸದರಿ ನಿಪಿ-31 ರಲ್ಲಿ ದಿನಾಂಕಃ 05.11.2014 ಎಂದು ನಾವೇ ಸುಳ್ಳು ಬರೆಯಿಸಿಕೊಂಡು ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ-31 ನ್ನು ನಾನೇ ತೆಗೆಯಿಸಿರುತ್ತೇನೆ.

07. ಈಗ ಸಾಕ್ಷಿಗೆ ದಿನಾಂಕಃ 12.03.2015 ರ ಅರ್ಜಿಯನ್ನು ತೋರಿಸಿದ್ದು ಸದರಿ ಅರ್ಜಿಯ ಮೇಲೆ ಪುಷ್ಪಾ ಕನ್ನಪ್ಪ ಕೊಪ್ಪದರವರ ಸಹಿ ಇದೆ ಎಂದರೆ ಸರಿ. ಸಾಕ್ಷಿ ಸದರಿ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಸದರಿ ಕನ್ನಪ್ಪ ಕೊಪ್ಪದ ರವರು ವಾರಸದಾರಳು ನಾನು ಎಂದು ನಮೂದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಪುಷ್ಪಾ ಕನ್ನಪ್ಪ ಕೊಪ್ಪದರವರು ಮಾತ್ರ ವಾರಸುದಾರರು ಎಂದು ಸದರಿ ಪುಷ್ಪಾ ರವರು ಬರೆದಿರುತ್ತಾರೆ ಎಂದರೆ ಸರಿ. ಸದರಿ ನಿಡಿ-1 ರಲ್ಲಿ ಸದರಿ ಪುಷ್ಪಾ ರವರಿಗೆ ಯಾವುದೇ ಗಂಡು ವ ಹೆಣ್ಣು ಮಕ್ಕಳು ಇಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿ. ಸದರಿ ನನ್ನನ್ನು ದತ್ತಕ ದಿನಾಂಕಃ

07.03.2015 ರಂದು ಪಡೆದಿರುತ್ತಾರೆ ಎಂದು ನಾನು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿ. ನಿಡಿ-1 ಅರ್ಜಿಯಲ್ಲಿ ದಿನಾಂಕಃ 12.03.2015 ರಂದು ಸಲ್ಲಿಸಿರುತ್ತಾರೆ ಎಂದರೆ ಸರಿ.

08. ನಾನು ಸದರಿ ಕನ್ನಪ್ಪ ಕೊಪ್ಪದರವರ ಕುಟುಂಬಕ್ಕೆ ದತ್ತು ಹೋದ ಸಮಯದಲ್ಲಿ ನನ್ನ ದತ್ತು ತಾಯಿಯ ಹೆಸರಿನಲ್ಲಿ 2 ಆಸ್ತಿಗಳು ಇದ್ದವು. ಅವುಗಳ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಆಸ್ತಿಗಳು ಸುಣ್ಣದ ಕೊಪ್ಪ ಗ್ರಾಮದಲ್ಲಿ ಇದ್ದವು. ಸದರಿ ಆಸ್ತಿಗಳು ನನ್ನ ದತ್ತಕ ತಾಯಿಯ ಹೆಸರಿನಲ್ಲಿ ಇದ್ದವು. ಸದರಿ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಗಳು ಈಗ ನನ್ನ ದತ್ತಕ ತಾಯಿಯ ಹೆಸರಿನಲ್ಲಿ ಇಲ್ಲ. ಸದರಿ ಆಸ್ತಿಗಳು ನನ್ನ ಜನಕ ತಂದೆ ಜಯಪ್ರಕಾಶ ರವರ ಹೆಸರಿನಲ್ಲಿವೆ. ನನ್ನ ದತ್ತಕ ತಾಯಿ ತೀರಿಕೊಂಡ ನಂತರ ಅವಳ ಹೆಸರಿನಲ್ಲಿದ್ದ ಆಸ್ತಿಗಳನ್ನು ನನ್ನ ಹೆಸರಿಗೆ ವಾರಸಾ ಮಾಡಿಕೊಂಡಿರಲಿಲ್ಲ. ನನ್ನ ಹೆಸರನ್ನು ವಾರಸಾ ಪ್ರಕಾರ ದಾಖಲಿಸಿಕೊಳ್ಳಲು ತೊಂದರೆ ಇರಲಿಲ್ಲ.

09. ದತ್ತಕ ಆದ ಬಗ್ಗೆ ನನಗೆ 2015 ರಲ್ಲಿ ಮಾಹಿತಿ ಇತ್ತು. ಸದರಿ ನನ್ನ ತಾಯಿಯ ಹೆಸರಿನಲ್ಲಿ ಇದ್ದ ಆಸ್ತಿಗಳಿಗೆ ನನ್ನ ಹೆಸರನ್ನು ಯಾಕೆ ದಾಖಲಿಸಿಕೊಳ್ಳಲಿಲ್ಲ ಎಂದು ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಆಸ್ತಿಗಳು ಈ ದಾವೆ ದಾಖಲಿಸುವ ಕಾಲಕ್ಕೆ ನನ್ನ ತಾಯಿಯ ಹೆಸರಿನಲ್ಲಿ ಇದ್ದವು. ಈ ದಾವೆಯನ್ನು 4 ಜಮೀನು, 1 ನಿವೇಶನ ಹಾಗೂ 1 ಮನೆಯಲ್ಲಿ ಪಾಲು ಹೇಳಿ ದಾಖಲಿಸಿರುತ್ತೇನೆ. ಸದರಿ ಆಸ್ತಿಗಳ ಸರ್ವೆ ನಂ. ಅಥವಾ ಆಸ್ತಿ ನಂಬರ ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಯಾವ ದಾವಾ ಆಸ್ತಿಗಳ ದಾಖಲಾತಿಗಳನ್ನು ನೋಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ದಾವಾ ಆಸ್ತಿಗಳ ದಾಖಲಾತಿಗಳನ್ನು ನೋಡದೇ ಇರುವುದರಿಂದ ನನಗೆ ಅವುಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

10. ಈಗ ಸಾಕ್ಷಿಗೆ ನಿಪಿ-12 ದಾಖಲೆಯನ್ನು ತೋರಿಸಿದ್ದು ಸದರಿ ನಿಪಿ-12 ಅಗಸನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ದಾಖಲೆಯನ್ನು ದಿನಾಂಕಃ

01.08.2016 ರಂದು ತೆಗೆಯಿಸಲಾಗಿದೆ ಎಂದರೆ ಸರಿ. ಸದರಿ ನಿಪಿ-12 ನ್ನು ಯಾರು ತೆಗೆಯಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ದಾಖಲೆಯನ್ನು ನಾನೇ ಹಾಜರು ಪಡಿಸಿರುತ್ತೇನೆ. ಸದರಿ ನಿಪಿ-12 ನ್ನು ನನ್ನ ಜನಕ ತಂದೆ ನನಗೆ ನೀಡಿರುತ್ತಾರೆ. ಅದೇರೀತಿ ನಾನು ಹಾಜರು ಪಡಿಸಿದ ಉಳಿದ ದಾಖಲಾತಿಗಳನ್ನು ನಾನು ಹೇಳಿದ ಮೇರೆಗೆ ನನ್ನ ಜನಕ ತಂದೆ ತೆಗೆಯಿಸಿರುತ್ತಾರೆ. 2016 ನೇ ಸಾಲಿನಲ್ಲಿ ಆಸ್ತಿ ಬೇಕಾಗಿದ್ದರಿಂದ ಸದರಿ ನಿಪಿ-12 ನ್ನು ತೆಗೆಯಿಸಲಾಗಿತ್ತು. 2016 ನೇ ಸಾಲಿನಲ್ಲಿ ಪ್ರತಿವಾದಿಯರನ್ನು ಆಸ್ತಿ ನೀಡಿ ಎಂದು ಕೇಳಿದ್ದೆವು. 2 ನೇ ಪ್ರತಿವಾದಿಯನ್ನು ಆ ಬಗ್ಗೆ ಕೇಳಿದ್ದೆವು. ಯಾವ ತಿಂಗಳಿನಲ್ಲಿ ಕೇಳಿದ್ದೆವು ಎಂದು ನೆನಪಿಲ್ಲ. ಸಾಕ್ಷಿ ಮುಂದುವರೆದು ನನ್ನ ದತ್ತಕ ತಾಯಿ ಕೇಳಿದ್ದರು ಎನ್ನುತ್ತಾರೆ. ಸದರಿ ಸಮಯದಲ್ಲಿ ನಾನು ನನ್ನ ದತ್ತಕ ತಾಯಿಯ ಜೊತೆ ಹೋಗಿರಲಿಲ್ಲ. ನಿಪಿ-12 ನ್ನು 2021 ರಲ್ಲಿ ತೆಗೆಯಿಸಲು ನನಗೆ ತೊಂದರೆ ಇರಲಿಲ್ಲ. ಸದರಿ ನಿಪಿ-12 ರಲ್ಲಿ ನಮೂದಿಸಿದ ಆಸ್ತಿಗಳು ಬದಲಾವಣೆ ಆದ ಬಗ್ಗೆ ನನಗೆ ಮಾಹಿತಿ ಇಲ್ಲ.

11. 2020-21 ನೇ ಸಾಲಿನಲ್ಲಿ ನನಗೆ 18 ವರ್ಷ ವಯಸ್ಸು ಆಗಿತ್ತು. 2015 ರ ಮೊದಲು ನನ್ನನ್ನು ದತ್ತು ಪಡೆದಿರಲಿಲ್ಲ. ನಿಪಿ-11 ರಲ್ಲಿ ನನ್ನನ್ನು 2009 ರಲ್ಲಿ ದತ್ತು ಪಡೆಯಲಾಗಿತ್ತು ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ನಿಪಿ-11 ರಲ್ಲಿ ನನ್ನನ್ನು 2009 ರಲ್ಲಿ ದತ್ತು ಪಡೆಯಲಾಗಿದೆ ಎಂದು ಬರೆದಿರುವುದು ಸರಿಯೋ ತಪ್ಪೋ ಎಂದು ನನಗೆ ಗೊತ್ತಿಲ್ಲ. ನನ್ನನ್ನು ದಿನಾಂಕ: 07.03.2015 ರಂದು ದತ್ತು ಪಡೆದಿರುತ್ತಾರೆ ಎಂದು ನನಗೆ ಮಾಹಿತಿ ಇದೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.